**ಓ.ಎಸ್. ನಂಃ 57/2016**

**ಪಿ.ಡಬ್ಲು – 1**

**ಸಾಕ್ಷಿಯನ್ನು ದಿನಾಂಕಃ 05.12.2022 ರಂದು ಪುನಃ ಕರೆಯಿಸಿ,ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 10 ರಿಂದ 13 ರವರ ಪರ ವಕೀಲರು, ಶ್ರೀ.ವಿ.ಎಸ್.ಬಿ ರವರಿಂದಃ**

18. ನನ್ನ ಪ್ರಮಾಣ ಪತ್ರಿಕೆಗೆ ನಾನೇ ಮಾಹಿತಿ ನೀಡಿದ್ದೇನೆ. 3 ನೇ ಪ್ರತಿವಾದಿ ನಮ್ಮ ಕುಟುಂಬದ ಅವಶ್ಯಕತೆಗಾಗಿ ಸರ್ವೆ ನಂ.114/1, 7 ಎಕರೆ 15 ಗುಂಟೆ ಜಮೀನನ್ನು ಎರಡು ಪ್ರತ್ಯೇಕ ಖರೀದಿ ಪತ್ರಗಳ ಮೂಲಕ ದಿನಾಂಕ 12–08–2002 ರಂದು ಪ್ರತಿವಾದಿ 10 ಮತ್ತು 11 ರವರಿಗೆ ಮಾರಾಟ ಮಾಡಿದ್ದಾರೆಂದರೆ ಸರಿ. ಸದರಿ ಜಮೀನನ್ನು ಖರೀದಿಸಿದ ನಂತರ ಪ್ರತಿವಾದಿ 10 ಮತ್ತು 11 ರವರು ಸ್ವಾಧೀನದಲ್ಲಿದ್ದಾರೆಂದರೆ ಸರಿ. ಪ್ರತಿವಾದಿ 3 ರವರು ಮಾರಾಟ ಮಾಡಿರುವ ವಿಚಾರ ನಮ್ಮ ಕುಟುಂಬದವರೆಲ್ಲರಿಗೂ ಗೊತ್ತು ಎಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ನನ್ನ ತಂದೆ ಹಿರಿತನ ಮಾಡುತ್ತಿದ್ದರೆಂದು ನುಡಿಯುತ್ತಾರೆ. ನನ್ನ ಸಹೋದರರಾದ ಪ್ರತಿವಾದಿ 3 ರವರು ಮಾರಾಟ ಮಾಡಿರುವುದಕ್ಕೆ ನನ್ನ ಅಭ್ಯಂತರವಿಲ್ಲ.

19. 2 ನೇ ಪ್ರತಿವಾದಿ ಪ್ರಧಾನ ದಿವಾಣಿ ನ್ಯಾಯಾಲಯ ರೋಣದಲ್ಲಿ ಓ.ಎಸ್ ನಂ.211/2014 ನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯನ್ನು ದಿನಾಂಕ 04–04–2015 ರಂದು ರಾಜಿ ಮಾಡಿಕೊಂಡಿದ್ದಾರೆಂದರೆ ನನಗೆ ಗೊತ್ತಿಲ್ಲ. ನನಗೆ 2015 ರಲ್ಲಿ ರಾಜಿ ಮಾಡಿಕೊಂಡಿರುವ ವಿಚಾರ ತಿಳಿಯಿತು. ಮಾರಾಟ ಮಾಡಿರುವ ಸ್ವತ್ತನ್ನು ಮೇಲ್ಕಂಡ ದಾವೆಯಲ್ಲಿ ಸೇರಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಮಾರಾಟ ಮಾಡಿರುವ ವಿಚಾರ ನನ್ನ ಸಹೋದರರಿಗೆ ಮತ್ತು ನನ್ನ ಚಿಕ್ಕಪ್ಪ ದೊಡ್ಡಪ್ಪರಿಗೆ ಗೊತ್ತಿದ್ದ ಕಾರಣ ಸೇರಿಸಿಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ಪ್ರತಿವಾದಿ 10 ಮತ್ತು 11 ರವರು ಪ್ರತಿವಾದಿ 12 ಮತ್ತು 13 ರವರಿಗೆ ದಿನಾಂಕ 24–12–2020 ರಂದು ಮಾರಾಟ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.114/1, 7 ಎಕರೆ 15 ಗುಂಟೆ ಜಮೀನಿನಲ್ಲಿ ಪ್ರತಿವಾದಿ 12 ಮತ್ತು 13 ಕ್ರಯವಾದ ನಂತರ ಸ್ವಾಧೀನದಲ್ಲಿದ್ದಾರೆಂದರೆ ಸರಿ. ಮೇಲ್ಕಂಡ ವಿಚಾರ ಗೊತ್ತಿದ್ದರೂ ಸಹ ಪ್ರತಿವಾದಿ 10 ಮತ್ತು 11 ರವರನ್ನು ಸೇರಿಸಿ ವಿನಾಕಾರಣ ತೊಂದರೆ ನೀಡುತ್ತಿದ್ದೇವೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಪ್ರತಿವಾದಿ 2 ರವರ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಂಜಸವಾದ ಕಾರಣ ನೀಡದಿರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 6 ರವರ ಪರ ಶ್ರೀ.ಎಸ್.ಪಿ.ಪಿರವರು ಮುಂದುವರೆದ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ. ಪ್ರತಿವಾದಿ 8 ರವರ ಪರ ಶ್ರೀ ವಿ.ಎ.ಡಿ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ .**

ಮರುವಿಚಾರಣೆ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತಲೇಖನದಂತೆ, ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಅದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು, ರೋಣ.